ಗೌರಿಯು, "ಅವಳ ಹತ್ರ ಹೊಸ ಆಟದ ಸಾಮಾನ್ ಐತೆ, ಅದುನ್ನ ಕೊಡು ಅಂತ ಕೇಳಿದ್ದಕ್ಕೆ ತಳ್ಳಿದ್ಲು. ನಾನು ಬಿದ್ದೆ, ಗಾಯ ಆಯ್ತು" ಎನ್ನುತ್ತಾ, "ನಂಗೆ ಆ ಬಣ್ಣದ ಹೊಸಾ ಆಟದ ಸಾಮಾನ್ ಬೇಕೂ..." ಎಂದು ಬಿಕ್ಕತೊಡಗಿದಳು. ನಡೆದಿರುವ ವಿಷಯವನ್ನೆಲ್ಲಾ ತಿಳಿದುಕೊಂಡ ಶ್ರೀಕಂಠನಿಗೆ ಅಸಲಿ ಸಂಗತಿಯನ್ನು ತನ್ನಿಂದ ಮುಚ್ಚಿಟ್ಟ ಹೆಂಡತಿಯ ಮೇಲೆ ನಖಶಿಖಾಂತ ಕೋಪ ಬಂತು. ಮನೆಗೆ ಬಂದವನೇ ಮೊದಲು ಹೆಂಡತಿಗೆ ತಾರಾಮಾರಿ ಬಯ್ದು, ನಂತರ ಹೊರಗೆ ಬಂದು, "ಇಬ್ಬರು ಮಕ್ಕಳು ಇರೋ ಮನೆಗೆ ಆಟದ ಸಾಮಾನು ತರಬೇಕಾದ್ರೆ ಎರಡೆರಡು ತರ್ಬೇಕು ಅನ್ನೋ ಜ್ಞಾನ ಈ ಮನೆಯಲ್ಲಿ ಇರೋರ್ಗೆ ಬೇಡ್ವಾ?" ಎಂದು ಜೋರಾಗಿ ಹೇಳುತ್ತಾ, ತನ್ನ ಪ್ರೀತಿಯ ಮಗಳಿಗೆ ಗಾಯ ಉಂಟುಮಾಡಿದ ಸಹನಾಳ ಕೈಯಲ್ಲಿದ್ದ ರೂಬಿಕ್ಸ್ ಕ್ಯೂಬನ್ನು ಕಿತ್ತುಕೊಂಡು, ಅದರಲ್ಲಿ ನೀಟಾಗಿ ಜೋಡಿಸಿದ್ದ ಒಂದೇ ಬಣ್ಣದ ಚೌಕಗಳನ್ನು ಸಿಟ್ಟಿನಿಂದ ಆ ಕಡೆ ಈ ಕಡೆ ತಿರುಗಿಸಿ, ನೆಲಕ್ಕೆಸೆದ.

ಮನೆಯಲ್ಲಿ ಇಬ್ಬರು ಹೆಣ್ಣುಮಕ್ಕಳಿದ್ದುದರಿಂದ, ಮಕ್ಕಳಿಗೆ ಪಟ್ಟಣದಿಂದ ಯಾರು ಏನೇ ವಸ್ತುಗಳನ್ನು ತಂದರೂ ಎರಡೆರಡು ತರುತ್ತಿದ್ದರು. ಜಡೆಗೆ ಹಾಕಿಕೊಳ್ಳುವ ಟೇಪು, ಕ್ಲಿಪ್, ಬಟ್ಟೆ, ಆಟದ ಸಾಮಾನು... ಹೀಗೆ ಏನೇ ತಂದರೂ ಇಬ್ಬರಿಗೂ ಒಂದೊಂದು ತರುವುದು ಮನೆಯಲ್ಲಿ ಎಲ್ಲರಿಗೂ ಅಭ್ಯಾಸವಾಗಿತ್ತು. ಹೀಗಾಗಿ ಇದ್ಯಾವುದೋ ಹೊಸ ಆಟದ ಸಾಮಾನು ಮನೆಯಲ್ಲಿ ಒಬ್ಬರಿಗೆ ಮಾತ್ರ ತಂದಿರುವುದರಿಂದಲೇ ಮಕ್ಕಳಿಬ್ಬರಿಗೂ ಜಗಳವಾಗಿ, ಕೊನೆಗೆ ಮಗಳ ಹಣೆಗೆ ಗಾಯವಾಗುವುದರಲ್ಲಿ ಪರ್ಯವಸಾನವಾಯಿತಲ್ಲ ಎಂಬ ಸಿಟ್ಟಿನಿಂದ ಶ್ರೀಕಂಠನು ಅಣ್ಣನ ಬಗ್ಗೆ ಬಾಯಿಗೆ ಬಂದಂತೆ ವದರಿದ. ತಾನು ಕಷ್ಟಪಟ್ಟು ದುಡಿಯುತ್ತಿದ್ದೇನೆ, ಆದರೆ ಅಣ್ಣನ ಕುಟುಂಬ ಮಜಾ ಮಾಡುತ್ತಾ ತಿರುಗುತ್ತಿದೆ. ಆದ್ದರಿಂದ ಈಗಲೇ ಆಸ್ತಿ ಪಾಲಾಗಬೇಕು, ತಾನು ಇನ್ಮೇಲೆ ಯಾವ ಹಂಗೂ ಇಲ್ಲದೆ ಸ್ವತಂತ್ರವಾಗಿ ಬದುಕಬೇಕು ಎಂಬುದು ಸ್ಫೋಟಗೊಂಡ ಅವನ ಮಾತುಗಳ ಒಟ್ಟು ಸಾರಾಂಶವಾಗಿತ್ತು.

ಕಣ್ಣೀರು ಹಾಕುತ್ತಾ ಎಲ್ಲವನ್ನೂ ಕೇಳಿಸಿಕೊಂಡ ನಂಜುಂಡನ ಹೆಂಡತಿಯು ಗಂಡ ಪಟ್ಟಣದಿಂದ ವಾಪಾಸಾಗುತ್ತಲೇ, ಎಲ್ಲಾ ವಿಷಯವನ್ನು ಸವಿಸ್ತಾರವಾಗಿ ವರದಿ ಒಪ್ಪಿಸಿದಳು. ಎಲ್ಲವನ್ನೂ ಕೇಳಿದ ನಂಜುಂಡನಿಗೆ ವಿಷಾದಭಾವ ಮೂಡಿತು. ನಿನ್ನೆ ತಂದ ಈ ಆಟದ ಸಾಮಾನು ಮನೆಯನ್ನು ಒಡೆಯುವ ಮಟ್ಟಕ್ಕೆ ಹೋಗುತ್ತದೆ ಎಂದು ನಂಜುಂಡನು ಎಣಿಸಿರಲಿಲ್ಲ. ಅದನ್ನು ನಂಜುಂಡ ಕೊಂಡುಕೊಂಡು ಬಂದಿರಲಿಲ್ಲ. ಏಕೆಂದರೆ ಮನೆಗೆ ಏನೇ ಕೊಂಡುಕೊಂಡು ಬಂದರೂ ಸಹನಾ ಮತ್ತು ಗೌರಿಗೆ ಎಂದು ಎರಡೆರಡು ಕೊಂಡುಕೊಂಡು ಬರುತ್ತಿದ್ದನು. ಈ ಆಟದ ಸಾಮಾನು, ಮಂಡಿಯ ಸಾಹುಕಾರ ಬಸವಣ್ಣೆಪ್ಪನ ಮೊಮ್ಮಗ ರಾಹುಲ್‌ನ ಕೈಯಿಂದ ನಂಜುಂಡನ ಮಗಳು ಸಹನಾಳ ಕೈಯಿಗೆ ಬಂದಿತ್ತು. ನಂಜುಂಡನು ಹೊಲದಲ್ಲಿ ಏನೇ ಬೆಳೆದರೂ ಬಸವಣ್ಣೆಪ್ಪನ ಮಂಡಿಗೇ ಮಾರುತ್ತಿದ್ದನು. ಆತನಿಗೂ ನಂಜುಂಡನ ತಂದೆಗೂ ಆ ಕಾಲದಿಂದಲೂ ವ್ಯವಹಾರಕ್ಕೂ ಮೀರಿದ ಆತ್ಮೀಯ ಸಂಬಂಧವಿತ್ತು. ತುರ್ತು ಸಮಯದಲ್ಲಿ ಹಣದ ಅವಶ್ಯಕತೆ ಎಂದು ಬಂದರೆ ಬಸವಣ್ಣೆಪ್ಪನು ಬರಿಯ ಕೈಯಲ್ಲಿ ಕಳುಹಿಸುತ್ತಿರಲಿಲ್ಲ. ಕೊಟ್ಟ ಹಣಕ್ಕೆ ಬಡ್ಡಿ ತೆಗೆದುಕೊಳ್ಳದೆ, ಬೆಳೆ ಬಂದಾಗ ಅದರಿಂದ ತನ್ನ ಸಾಲವನ್ನು ಹಿಂಪಡೆಯುತ್ತಿದ್ದನು. ಹೀಗಾಗಿ ಇಬ್ಬರ ಕುಟುಂಬಗಳ ನಡುವೆ ಆತ್ಮೀಯತೆಯು ಬೆಳೆದಿತ್ತು. ನಂಜುಂಡನು ಈ ಬಾರಿ ಮಂಡಿಗೆ ಹೋಗಿದ್ದಾಗ ತಾನೂ ಬರುವುದಾಗಿ ಹಟ ಹಿಡಿದಿದ್ದ ಮಗಳು ಸಹನಾಳನ್ನು ಜೊತೆಗೆ ಕರೆದುಕೊಂಡು ಹೋಗಿದ್ದ. ದೊಡ್ಡವರು ವ್ಯವಹಾರ ಮಾತನಾಡುತ್ತಿರುವಾಗ, ಸಹನಾಳಿಗಿಂತ ಸ್ವಲ್ಪ ದೊಡ್ಡವನಾದ ಬಸವಣ್ಣೆಪ್ಪನವರ ಮೊಮ್ಮಗ ರಾಹುಲ್ ರೂಬಿಕ್ಸ್ ಕ್ಯೂಬ್ ಹಿಡಿದುಕೊಂಡು ಜೋಡಿಸುತ್ತಾ ಅಲ್ಲೇ ಕೂತಿದ್ದ. ಬಣ್ಣದ ರೂಬಿಕ್ಸ್ ಕ್ಯೂಬನ್ನು ಪ್ರಥಮ ಬಾರಿಗೆ ನೋಡಿದ ಸಹನಾಳನ್ನು ಅದು ತುಂಬಾ ಆಕರ್ಷಿಸಿತ್ತು. ಆರು ಮುಖವುಳ್ಳ ಆ ಕ್ಯೂಬ್‌ನಲ್ಲಿ ಅಲ್ಲಲ್ಲಿ ಚದುರಿರುವ ಬಣ್ಣದ ಚೌಕಗಳನ್ನು ತಿರುಗಿಸುತ್ತಾ, ಒಂದೊಂದು ಬಣ್ಣದ ಚೌಕಗಳನ್ನು ಒಂದೊಂದು ಕಡೆ ಬರುವಂತೆ ಜೋಡಿಸುವುದು ಬಹಳ ಕುತೂಹಲಕರವಾಗಿತ್ತು. ಅದನ್ನು ಜೋಡಿಸುವುದು ಹೇಗೆಂದು ಆಗಲೇ ಕಲಿತಿದ್ದ ರಾಹುಲ್, ಸಹನಾಳು ಕೇಳಿದಳೆಂದು ಆಟವಾಡಲು ಅವಳಿಗೆ ಕೊಟ್ಟ. ಕೊಡುವುದಕ್ಕಿಂತ ಮುಂಚೆ ಬಣ್ಣದ ಚೌಕಗಳನ್ನು